ಕಾಯಬೇಕು? ಆ ಕಡೆ ಗಡಗಡೆ ಖಾಲಿ ಐತಿ ನೋಡು. ನಿನ್ನ ಕಾಲ ಮುಂದುಗಡೆಯೆ ಹಗ್ಗ, ಕೊಡ ಇದೆ. ಒಜ್ಜೆಯಾಗಲಾರದಂಥ ಸಣ್ಣ ಕೊಡ ಕೂಡ ಐತಿ ನೋಡು. ನೀರು ಸೇದಿ ನಮಗೆ ಹಣಿಸು. ನಿನಗೆ, ನಿನ್ನ ತಂದೆತಾಯಿಗೆ ಪುಣ್ಯ ಬರತೇತಿ' ಅವರ ಮಾತು ಇನ್ನೂ ಮುಗಿದಿರಲಿಲ್ಲ. ಬಾಲಕಿಯೆದುರು ಥಳಥಳ ಹೊಳೆಯುವ ಅಪೂರ್ವ ಕೊಡ ಮತ್ತು ಸೇದುವ ಹಗ್ಗ ಕಂಡವು. ಅಲ್ಲಿ ಕೂಡಿದ ಜನ ಇದುವರೆಗೂ ಅಂತಹ ಕೊಡ ಕಂಡಿರಲಿಲ್ಲ. ಅದು ಚಿನ್ನದ ಕೊಡವೆ? ಅಷ್ಟೇಕೆ ಹೊಳೆಯುತ್ತಿದೆ? ಬಾಲಕಿ ತನ್ನ ಕಣ್ಣನ್ನು ತಾನೇ ನಂಬಲಿಲ್ಲ. ಅವಳಿಗೂ ನೀರು ಸೇದುವ ಆಸೆಯಿತ್ತು. ಆ ಹುಡುಗಿ ಹೇಗೆ ಕೊಡವನ್ನು ಕಟ್ಟಿದಳೋ, ಹೇಗೆ ಕೆಳಗೆ ಬಿಟ್ಟಳೋ, ಹೇಗೆ ಜಗ್ಗಿದಳೋ ಎಲ್ಲ ಕ್ಷಣದಲ್ಲಿ ನಡೆದುಹೋಯಿತು. ಆ ದೃಶ್ಯವನ್ನು ನೋಡಿದವರು ಸ್ತಂಭೀಭೂತರಾದರು. ಅಲ್ಲಿ ಕೂಡಿದ್ದ ಹೆಂಗಸರೆಲ್ಲರೂ 'ನಮ್ಮ ತಪ್ಪನ್ನು ಕ್ಷಮಿಸಿ' ಎನ್ನುತ್ತ ಸಂತರ ಪಾದಗಳಿಗೆ ಎರಗಿದರು. ಶರಣರು ನೀರು ಕುಡಿದು 'ಈ ಬಾವಿಯ ನೀರು ಎಷ್ಟು ಸಿಹಿಯಾಗಿದೆ. ಸಾವಿರ ವರ್ಷ ಇದು ಹೀಗೆಯೆ ಇರಲಿ' ಎಂದರು. 'ಈ ಕೊಡವನ್ನು ನೀನೆ ಇಟ್ಟುಕೋ ತಾಯಿ' ಎಂದು ತುಂಬಿದ ಕೊಡವನ್ನು ಬಾಲಕಿಯ ತಲೆ ಮೇಲಿಟ್ಟು ಅವಳಿಗೆ ಆಶೀರ್ವಾದ ಹೇಳಿ ಮುನ್ನಡೆದರು.

ಮುಂದೆ ಸ್ವಲ್ಪ ಸಮಯದಲ್ಲಿಯೆ ಅದು ಊರಿಗೆಲ್ಲ ಗೊತ್ತಾಗಿ ಎಲ್ಲರೂ ಓಡೋಡಿ ಬಾವಿಯ ಕಡೆ ಬಂದರು. ಅಷ್ಟೊತ್ತಿಗೆ ಸಂತರೆಲ್ಲ ಹೊರಟು ಹೋಗಿದ್ದರು! ಅಪೂರ್ವ ಸೊಗಸಿನಿಂದ ಹೊಳೆಯುವ ಕೊಡ ಆ ಹೆಣ್ಣುಮಗಳ ಮನೆತನದವರ ಬಳಿ ಇನ್ನೂ ಇದೆಯೆಂದು ಹೇಳುತ್ತಾರೆ. ಜಾತ್ರೆಯ ದಿನ ಆ ಪರಿವಾರದವರು ಆಗಮಿಸಿ ಕೊಡವನ್ನು ಬಾವಿಕಟ್ಟೆಯ ಮೇಲಿಟ್ಟು ಪೂಜೆ ಮಾಡುವ ಸಂಪ್ರದಾಯ ಮೊನ್ನೆಮೊನ್ನೆಯವರೆಗೂ ಇತ್ತು. ನೌಕರಿ ನಿಮಿತ್ತ ಅವರು ಬೆಂಗಳೂರಿಗೆ ಹೋದ ಮೇಲೆ ಆ ಸಂಪ್ರದಾಯಕ್ಕೆ ಒಂದು ಕೊನೆ ಬಂತೆಂದು ಕಾಣುತ್ತದೆ. ಮಿರಿಮಿರಿ ಮಿಂಚುವ ಆ ಕೊಡವನ್ನು ತಾನು ನೋಡಬೇಕಿತ್ತಲ್ಲ ಎಂದು ಮಾಯಕ್ಕ ಅಂದುಕೊಳ್ಳುವಳು. ಆ ಬಾಲಕಿಯ ಫೋಟೊ ಇದ್ದಿದ್ದರೆ ಅದನ್ನು ಸ್ಪರ್ಶಿಸಬೇಕಿತ್ತು! ಆ ಸಂತರು ನಡೆದಾಡಿದ ಹೆಜ್ಜೆಗಳ ಗುರುತುಗಳು ಇಲ್ಲೆಲ್ಲ ಇವೆಯೇನೋ! ಮಾಯಕ್ಕ ಒಂದೊಂದು ಸಲ ಬಾವಿ ಕಟ್ಟೆಯ ಸುತ್ತಲೂ ಶರಣು ಎನ್ನುತ್ತ ಪ್ರದಕ್ಷಿಣೆ ಹಾಕುವಳು.



ಬಾವಿಕಟ್ಟೆಯ ಒಂದು ಕಡೆ 'ಸಂತರು ಸ್ಪರ್ಶಿಸಿದ ಜಾಗ' ಎಂದು ಅಮೃತಶಿಲೆಯಲ್ಲಿ ಕೆತ್ತಿದ್ದಿದೆ. ಅದಕ್ಕೆ ಹಣೆ ಹಚ್ಚಿ ವಂದಿಸುವಳು. ಆ ಬಾಲಕಿಯ ಪುಣ್ಯ ಎಂತಹದ್ದೆಂದು ನೆನೆಸಿಕೊಳ್ಳುತ್ತ ಆ ಹುಡುಗಿ ತಾನಾಗಬಾರದಾಗಿತ್ತೆ ಎಂದು ಕಲ್ಪಿಸಿಕೊಳ್ಳುವಳು.

'ತಂದಿಯ ನೆನೆದರ ತಂಗಳ ಬಿಸಿಯಾಯ್ತು, ಗಂಗಾದೇವಿ ನನ್ನ ಹಡೆದವ್ವನ ನೆನೆದರ ಮಾಸಿದ ತಲೆಯು ಮಡಿಯಾಯ್ತು.' ಬಾವಿಯನ್ನು ಸುತ್ತು ಹಾಕುವಾಗ ಅವಳಿಗೆ ಅರಿವಿಲ್ಲದಂತೆಯೆ ಅವಳ ನಾಲಗೆ ನುಡಿಯುತ್ತಿತ್ತು. 'ಊರ ಕಾಯುವ ದೇವಿ, ಮಳೆ ಬರಿಸವ್ವ, ದನಕರು ಉಳಿಸವ್ವ, ಮಕ್ಕಳ ಮಾರಿ ನೋಡವ್ವ ದೇವಿ,' ಮಳೆರಾಯನನ್ನು ನೆನೆಯುವ ಹಾಡನ್ನೂ ಮಾಯಕ್ಕ ಹಾಡಿದಳು. ಮನೆಯ ಮುಂದಿನ ಗೆಳತಿ, ದನಿಯ ಕೂಡಿಸಬಾರ, ದನಿ ಸುದ್ದ, ನಿನ್ನ ಗುಣ ಸುದ್ದ. ನೆರೆದಿದ್ದ ಹೆಂಗಸರೂ ದನಿಗೂಡಿಸಿದರು. ಅರ್ಧ ತಾಸಿನ ತಮ್ಮ ಆರಾಧನೆ ಮುಗಿಯುವತನಕ ಅಲ್ಲಿ ಗಂಡಸರು ಬರಬಾರದೆಂದು ಮಾಯಕ್ಕ ತಾಕೀತು ಮಾಡಿದ್ದಳು. ಒಳಗೊಳಗೆ ಕೊಂಕು ನುಡಿದರೂ ಅಧ್ಯಕ್ಷೆಯ ಮಾತನ್ನು ಅವರು ತಳ್ಳಿ ಹಾಕುವಂತಿರಲಿಲ್ಲ. ಆಕೆ ಹೇಳಿದ್ದಾಳೆಂದರೆ ಮಾತು ಮುಗಿಯಿತು!

'ಇವಳು ಪೂಜೆ ಮಾಡಿದಳೆಂದು ಮಳೆ ಸುರಿಯತೇನು? ಈಕೆ ಇಂತಹ ನಾಟಕ ಮಾಡುವುದು ಬಿಡಲಿ. ಮಾಯಕ್ಕ ಅಧ್ಯಕ್ಷಳಾದಾಗಿನಿಂದ ಊರಿಗೆ ಸರಿಯಾಗಿ ಮಳೆ ಬೆಳೆ ಬರುತ್ತಿಲ್ಲ. ಹೆಂಗಸರಿಗೆ ಅಧಿಕಾರ ಕೊಟ್ಟದ್ದೀರಿ, ಈಗ ಅನುಭವಿಸಿರಿ,' ಮುಂದಿನ ಚುನಾವಣೆಗೆ ಸಿದ್ಧತೆ ನಡೆಸುತ್ತಿದ್ದ ಸೋಮಣ್ಣ ಅರಳಿಗಿಡದ ಕಟ್ಟೆಗೆ ಕುಳಿತುಕೊಂಡು ತನ್ನೆದುರಿಗಿದ್ದ ಮಂದಿಗೆ ಹೇಳುತ್ತಿದ್ದ. ಮಾಯಕ್ಕ ಒಂದು ರೀತಿಯಲ್ಲಿ ಇತಿಹಾಸ ನಿರ್ಮಿಸಿದ್ದಾಳೆ. ಅವಳಿಲ್ಲದೆ ಊರಿನ ಚರಿತ್ರೆಯೇ ಇಲ್ಲ! ಅವಳ ಸಾಧನೆಗಳನ್ನು ಅನೇಕರು ಸಭೆಯಲ್ಲಿ ಮನದಟ್ಟು ಮಾಡುತ್ತಿದ್ದರು. ಅವಳು ಅಕಸ್ಮಾತ್ ಈ ಊರಿಗೆ ಬಂದಿರದಿದ್ದರೆ, ಅಕಸ್ಮಾತ್ ಪಂಚಾಯತಿಯ ಅಧ್ಯಕ್ಷಳಾಗಿರದಿದ್ದರೆ ಊರು ಇಷ್ಟೊಂದು ಸುಧಾರಣೆಯಾಗುತ್ತಿರಲಿಲ್ಲ. ಅವಳ ಕತೆಯೆಂದರೆ ಒಂದು ನಾಗರಿಕತೆಯ ಕತೆಗೆ ಸಮವೆಂದು ನಿವೃತ್ತ ಹೈಸ್ಕೂಲು ಹೆಡ್‌ಮಾಸ್ತರರಾದ ಬಸಣ್ಣ ನಾವಲಗಟ್ಟಿ ಹೇಳುವುದು ಸತ್ಯವೇ ಇರಬೇಕು. ಸುತ್ತಮುತ್ತಲಿನ ಶಾಲೆಹೈಸ್ಕೂಲುಗಳಲ್ಲಿ ಜನರಲ್ ನಾಲೇಜ್, ಪ್ರಬಂಧ, ನೀತಿಕತೆ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸುವುದಕ್ಕೆ ಪ್ರಸಿದ್ಧರಾಗಿದ್ದ ಈ ಮಾಸ್ತರರು ಇತ್ತೀಚೆಗೆ ಮಾಯಕ್ಕನ ಆಪ್ತವಲಯದಲ್ಲಿ ಒಬ್ಬರಾಗಿದ್ದರು. ಓದುಬರಹ ಬಲ್ಲವರು, ಶಾಲೆ ಕಾಲೇಜು ಮುಗಿಸಿದವರು ಇತ್ತೀಚೆಗೆ ಅವಳೊಂದಿಗೆ ಗುರುತಿಸಿಕೊಳ್ಳುತ್ತಿದ್ದರಿಂದ ಅವಳ ಬಲ ಮತ್ತಷ್ಟು ಹೆಚ್ಚಿದಂತಾಗಿತ್ತು.

'ಈ ನಾವಲಗಟ್ಟಿ ಬಸಣ್ಣ ಮೊದಲಿಂದ ಆಕಿ ಅಭಿಮಾನಿ. ಒಂದೆರಡು ಪುಸ್ತಕ ಬರದಾನ ಅನ್ನೋದಕ್ಕ ಅಂವಗ ಕೋಡು ಮೂಡ್ಯಾವ. ಅವಳು ಕೊಡೊ ನಾಕು ದುಡ್ಡಿಗೆ ಆಕಿ ಹೇಳಿದ್ಹಂಗ ಕೇಳ್ತಾನ. ಇಂತಹ ಗುಲಾಮರಿಂದನ ಮಾಯಕ್ಕ ಪಂಚಾಯಿತಿಗೆ ಆರಿಸಿ ಬಂದ್ಲು. ಪೆನಶನ್ ಆದ ಮ್ಯಾಲ ತಣ್ಣಗೆ ಮನೆಯಲ್ಲಿ ಕುಂಡ್ರೂದು ಬಿಟ್ಟು ಈ ಮಾಸ್ತರರಿಗೆ ಇದೆಲ್ಲ ಯಾಕ ಬೇಕಾಗಿತ್ತು?' ಮಾಸ್ತರರ ಬಗ್ಗೆ ಆಡಿಕೊಳ್ಳುವವರು ಇದ್ದೇ ಇದ್ದರು. ಮಾಸ್ತರರು ಒಬ್ಬ ಕಾರ್ಯಕರ್ತರಾಗಿ ಹಿನ್ನೆಲೆಯಲ್ಲಿದ್ದರೆ ಯಾರೂ ಅವರನ್ನು ಗಂಭೀರವಾಗಿ ತೆಗೆದುಕೊಳ್ಳುವ ಪ್ರಶ್ನೆಯಿರಲಿಲ್ಲ. ಆದರೆ ಅವರು ಮುಂಚೂಣಿಯಲ್ಲಿರಲು ಹವಣಿಸುವವರು. ಜನರ ತಲೆ ಕೆಡಿಸುತ್ತಿದ್ದ ವಿಚಾರವೆಂದರೆ ಮಾಸ್ತರರು ಮಾಯಕ್ಕನ ಜೀವನ ಚರಿತ್ರೆ ಬರೆಯುತ್ತಿದ್ದಾರೆ ಎನ್ನುವ ಸುದ್ದಿ! ಮಾಯಕ್ಕನ ಜೀವನಚರಿತ್ರೆ ಬರೆದು ಅದನ್ನು ಗದುಗಿನಲ್ಲಿ ಮುದ್ರಣ ಮಾಡಿ, ಹತ್ತಾರು ಸ್ವಾಮಿಗಳನ್ನು ಕರೆಸಿ ಅದ್ದೂರಿಯಿಂದ ಬಿಡುಗಡೆ ಮಾಡುವ ಯೋಜನೆಯಿದೆ. ಅದು ಸತ್ಯವೋ, ಮಿಥ್ಯವೋ ಗೊತ್ತಿಲ್ಲ. ಯಾಕೆಂದರೆ ನಾವಲಗಟ್ಟಿ ಬಸಣ್ಣ ಮೊದಲಿನಿಂದಲೂ ಗುಮ್ಮನಗುಸುಕ. ಅತಿರಂಜಿತವಾಗಿ ಬರೆದು ಈಕೆಯನ್ನು ಇನ್ನೂ ಇಪ್ಪತ್ತು ವರ್ಷ ಪಂಚಾಯಿತಿ ಗಾದಿಯ ಮೇಲೆ ಕೂಡ್ರಿಸುವ ಬಯಕೆ ಇದ್ದಿರಬಹುದು. ತೆಂಗಿನ ಗೆರಟೆಯಿರದಿದ್ದರೂ ತಮ್ಮಲ್ಲಿ ಬಹಳಷ್ಟಿದೆಯೆಂದು ಹೇಳುವಲ್ಲಿ ಮಾಸ್ತರರು ನಂಬರ್ ಒನ್! ವೇಷ ಕಟ್ಟುವುದರಲ್ಲಿ, ಸೋಗು ಹಾಕುವುದರಲ್ಲಿ ಅವರದು ಎತ್ತಿದ ಕೈ. ಶಾಲಾ ತಪಾಸಣೆಯ ಸಾಹೇಬರನ್ನು ಸಂಪ್ರೀತಗೊಳಿಸುವುದರಲ್ಲಿ ಇವರು ನಿಸ್ಸೀಮರಿದ್ದರಂತೆ. ಸಾಹೇಬರನ್ನು ಬೇಸ್ತು ಬೀಳಿಸುವಲ್ಲಿಯೂ ಅವರನ್ನು ಮೀರಿಸುವವರಿಲ್ಲ. ಇವರ ಶಕ್ತಿಸಾಮರ್ಥ್ಯಗಳು ಮಾಯಕ್ಕನಿಗೂ ತಿಳಿದುಬಂದಿರಬೇಕು. ಅದಕ್ಕೆಂದೇ ಆಪ್ತವಲಯದಲ್ಲಿ ಸೇರಿಸಿಕೊಂಡಿದ್ದಾರೆ. ಮಾಯಕ್ಕ ಭೇಷ್ ಎಂದ ಮೇಲೆ ಮಾಸ್ತರರ ಬಗ್ಗೆ ಭಯ, ಭಕ್ತಿ ಸಹಜವಾಗಿ ಹೆಚ್ಚಾದವು. ಬಸಣ್ಣ ಮಾಸ್ತರರ ಒಂದು ವಿಶಿಷ್ಟತೆಯೆಂದರೆ ಅವರು ವೈರಿಗಳನ್ನು ತುಂಬ ಸ್ವಾಭಾವಿಕವಾಗಿ ನಿಭಾಯಿಸಬಲ್ಲರು! ಮಾಯಕ್ಕನ ಪುಸ್ತಕ ಬರೆಯುತ್ತಿರುವುದಕ್ಕೆ ಯಾರೂ ಆಶ್ಚರ್ಯಪಡಬೇಕಾಗಿರಲಿಲ್ಲ. ಆಶ್ಚರ್ಯದ ಸಂಗತಿಯೆಂದರೆ ಅಧ್ಯಕ್ಷ ಸ್ಥಾನದಲ್ಲಿ ಮಾಯಕ್ಕನ ಬದಲು ಸೋಮಣ್ಣ ಇದ್ದರೂ ಅವರ ಜೀವನಕಥೆಯನ್ನು ಇವರು ಬರೆದೇ ಬರೆಯುತ್ತಿದ್ದರು ಎನ್ನುವುದು! ತಾವು ಬರೆಯುವ ಪುಸ್ತಕದಿಂದ ತಮಗೇನು ಲಾಭವಿದೆ ಎನ್ನುವುದರ ಮೇಲೆ ಮಾಸ್ತರರ ಧ್ಯಾನ ಕೇಂದ್ರೀಕೃತವಾಗಿರುತ್ತಿತ್ತು.

ಮಾಸ್ತರರು ಈ ರೀತಿ ಇದ್ದಿರಲಿಲ್ಲವೆನ್ನುವುದನ್ನು ಅನೇಕರು ನೆನೆಸಿಕೊಳ್ಳುತ್ತಾರೆ. ನೌಕರಿಯ ಆರಂಭದಲ್ಲಿ ಅವರು ಎಷ್ಟೊಂದು ಮುಗ್ಧರಿದ್ದರು! ನಾಲ್ಕೈದು ಬಡ ವಿದ್ಯಾರ್ಥಿಗಳನ್ನು ಮನೆಯಲ್ಲಿಟ್ಟುಕೊಂಡು ಓದಿಸುತ್ತಿದ್ದರು. ಕೆಲವರ ಫೀಯನ್ನು ತಾವೇ ಭರಿಸಿದ್ದರು. ಅವರ ಮನೆಗೆ ಯಾವುದೇ ವಿದ್ಯಾರ್ಥಿ ಯಾವುದೇ ಅಳುಕಿಲ್ಲದೆ ಹೋಗಿಬರಬಹುದಿತ್ತು. ಅಡುಗೆಮನೆಗೆ ಹೋಗಿ ತಮಗೆ ಬೇಕೆನಿಸಿದ್ದ ತಿಂಡಿಯನ್ನು ತಿನ್ನಬಹುದಾಗಿತ್ತು. ಆ ಹುಡುಗ ಆ ಜಾತಿಯವನು, ಈ ಹುಡುಗ ಈ